ಮಗ: ಅಪ್ಪ ನೀವು ಕಾಡಿನ ಯಾವ ಕ್ರೂರ ಮೃಗಗಳಿಗೂ ಹೆದರುವುದಿಲ್ಲ ಅಲ್ಲವೇ?
ತಂದೆ: ಹೌದು ನಾನು ಯಾವ ಕಾಡು ಮೃಗಗಳಿಗೂ ಹೆದರುವುದಿಲ್ಲ.
ಮಗ: ಈ ವಿಷಯ ಗೊತ್ತಿತ್ತು, ಬಿಡಿ, ನೀವು ಅಮ್ಮನಿಗೆ ಮಾತ್ರವೇ ಹೆದರುವುದು ಅಲ್ಲವೇ?

ಧನಂಜಯ: ಗಣೇಶ ಈ ಔಷಧ ಕುಡಿದರೆ ದೀರ್ಘಾಯುಷಿಗಳಾಗುತ್ತಾರೆ.
ಗಣೇಶ: ಖಂಡಿತ ಬೇಡ, ಮದುವೆಯಾಗದಿದ್ದರೆ ತೆಗೆದುಕೊಳ್ಳಬಹುದಿತ್ತು.

ತಾಯಿ: ಏಕೆ ಕಂದ ಅಳ್ತಾ ಇದಿಯಲ್ಲ?
ಮಗು: ನೀನು ಇಲ್ಲದಿರುವಾಗ ಬಿದ್ದುಬಿಟ್ಟೆ.
ತಾಯಿ: ಆಗ ಅಳದೆ ಈಗ ಅಳ್ತಾ ಇದ್ದೀಯಲ್ಲ?
ಮಗು: ಆಗ ನೀನು ಇರಲಿಲ್ಲವಲ್ಲ.

ಕೃಷ್ಣ: ನಾಣಿ, ನಾವು ರಾತ್ರಿ ಊಟವಾದ ತಕ್ಷಣ ಮಲಗಬಾರದು ಅಂತ ಹೇಳುತ್ತಾರಲ್ಲ ಏಕೆ?
ನಾಣಿ: ಏಕೆ ಹೇಳುತ್ತಾರೆ ಅಂದರೆ, ಊಟವಾದ ಮೇಲೆ ಸ್ವಲ್ಪ ಹೊತ್ತು ವಾಟ್ಸ್ಆ್ಯಪ್, ಫೇಸ್‌ಬುಕ್ ನೋಡಬೇಕಲ್ಲ ಅದಕ್ಕೆ!


ರವಿ: ಅಪ್ಪ ನೀವು ಆ ಕೇಸನ್ನು ವಾದ ಮಾಡಿ ಗೆದ್ದಿರುವುದನ್ನು ಎಲ್ಲರೂ ಹೊಗಳುತ್ತಾ ಇದ್ದಾರೆ.
ಲಾಯರ್: ಹೌದು ನೀನಾದರೂ ನನ್ನ ಅರ್ಥಮಾಡಿಕೊಂಡೆಯಲ್ಲ.
ರವಿ: ಅದೇನೋ ಸರಿ ಅಪ್ಪ ನೀವು ಯಾವ ಕೇಸನ್ನಾದರೂ ಗೆಲ್ಲುತ್ತೀರಿ, ಆದರೆ ಅಮ್ಮನ ವಾದದ ಮಾತಿನಲ್ಲಿ ಯಾವಾಗಲೂ ಸೋಲುತ್ತೀರಲ್ಲ?


ಡಾಕ್ಟರ್: ಕೃಷ್ಣರವರೇ, ನಾನು ಮಾಡಿದ ಆಪರೇಷನ್‌ನಿಂದ ನೀವು ಗುಣಮುಖರಾಗಿ ನಡೆಯುವಂತಾದರಲ್ಲ ಅದೇ ಸಂತೋಷ. ಅಂದ ಹಾಗೆ ಈಗ ನೀವು ಎಲ್ಲೆಲ್ಲಿಯೂ ನಡೆದುಕೊಂಡೇ ಹೋಗುತ್ತೀರಂತಲ್ಲ?
ಕೃಷ್ಣ: ಹೌದು ಸರ್, ನಿಮ್ಮ ಬಿಲ್ ಕಟ್ಟುವುದಕ್ಕೆ ಇದ್ದ ಕಾರನ್ನು ಮಾರಿದ್ದಾಯಿತು.




ಅರವಿಂದ: ಮಂಜು ನಾನು ಎರಡು ಕೆಲಸಗಳನ್ನು ನಿತ್ಯ ತಪ್ಪದೇ ಮಾಡುತ್ತೇನೆ.
ಮಂಜು: ಹೌದಾ, ಆ ಎರಡು ಕೆಲಸಗಳು ಯಾವುವು?
ಅರವಿಂದ: ಒಂದು ಎಚ್ಚರವಾದೊಡನೆ ಏಳುವುದು, ಇನ್ನೊಂದು ನಿದ್ದೆ ಬಂದೊಡನೆ ಮಲಗುವುದು.

ಪತಿ: (ಕುಡಿದು ಬಂದು) ಈಗ ನಾನು ಸ್ವರ್ಗದಲ್ಲಿದ್ದೇನೆ ಕಣೆ.
ಪತ್ನಿ: ಅದು ಸಾಧ್ಯವೇ ಇಲ್ಲ.
ಪತಿ: ನೀನು ಏನೇ ಹೇಳು ನಾನು ಈಗ ಸ್ವರ್ಗದಲ್ಲಿದ್ದೇನೆ.
ಪತ್ನಿ: ನಾನು ನಿಮ್ಮ ಬಳಿ ಇರುವಾಗ ಅದು ಎಂದಿಗೂ ಸಾಧ್ಯವಿಲ್ಲ ಕಣ್ರೀ.




ಆತ: ಸ್ವಾಮೀಜಿ, ನನ್ನಾಕೆ ನಾನು ಹೇಳಿದಂತೆ ಕೇಳುವ ಯಾವುದಾದರೂ ತಂತ್ರಗಳಿದ್ದರೆ ತಿಳಿಸಿ.
ಸ್ವಾಮೀಜಿ: ಆ ತಂತ್ರಗಳು ನನಗೆ ಗೊತ್ತಿದ್ದರೆ ನಾನೇಕೆ ಸನ್ಯಾಸಿ ಆಗುತ್ತಿದ್ದೆ ಮಗು.




ಮೂರ್ತಿ: ಚಂದ್ರು ನೀನು ದಾರಿಯಲ್ಲಿ ಕಂಡ ಆ ವ್ಯಕ್ತಿಗೆ ನಮಸ್ಕಾರ ಮಾಡಿದ್ದೇನೋ ಸರಿ, ಆದರೆ ಆ ವ್ಯಕ್ತಿ ಪ್ರತಿ ನಮಸ್ಕಾರ ಮಾಡಲಿಲ್ಲವಲ್ಲ?
ಚಂದ್ರು: ಆತ ಯಾವಾಗಲೂ ಹಾಗೆಯೇ, ಕೊಟ್ಟಿದ್ದನ್ನು ಹಿಂತಿರುಗಿಸಿ ಕೊಡುವ ಅಭ್ಯಾಸ ಇಲ್ಲ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ